

ಕಾರ್ಯಕ್ರಮಕ್ಕೆ ಡಿಸ್ಟ್ರಿಕ್ಟ್ ಎನ್‌ಫೋರ್ಸ್‌ಮೆಂಟ್ ಆಫೀಸರ್ (DEnO) ರವರನ್ನು ನೋಡಲ್ ಅಧಿಕಾರಿಯಾಗಿ ನೇಮಕ ಮಾಡಿದೆ.

### ದಾನಿಗಳಿಗೆ ಸರ್ಕಾರದ ಪ್ರಶಂಸೆ!

ಅಂಗದಾನದ ಮಹತ್ವದ ಬಗ್ಗೆ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಲು ಮತ್ತು ಈ ವಿಷಯಕ್ಕೆ ಸಂಬಂಧಿಸಿದ ಮೂಢನಂಬಿಕೆಗಳು, ತಪ್ಪು ಕಲ್ಪನೆಗಳನ್ನು ಹೋಗಲಾಡಿಸಲು ಸರ್ಕಾರವು ನಿರಂತರ ಪ್ರಯತ್ನ ನಡೆಸುತ್ತಿದೆ. ಮಿದುಳು ನಿಷ್ಕ್ರಿಯವಾದ ನಂತರ ಅಂಗಾಂಗಗಳನ್ನು ದಾನ ಮಾಡಿದ ಕುಟುಂಬಗಳಿಗೆ ಗೌರವ ಸಲ್ಲಿಸಲು, ಇತರರನ್ನು ಪ್ರೇರೇಪಿಸಲು, 2024ರ ಮಾರ್ಚ್ 1ರಂದು ಕರ್ನಾಟಕ ರಾಜ್ಯದ ಸನ್ಮಾನ್ಯ ಮುಖ್ಯಮಂತ್ರಿಗಳು ಪ್ರಶಂಸಾ ಪತ್ರ ವಿತರಣಾ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.

ಈ ಹಿನ್ನೆಲೆಯಲ್ಲಿ ಪ್ರತಿ ವರ್ಷ ಜ.26ರ ಗಣರಾಜ್ಯೋತ್ಸವ ಹಾಗೂ ಆ.15ರ ಸ್ವಾತಂತ್ರ್ಯ ದಿನಾಚರಣೆ ಅಂಗವಾಗಿ ಜಿಲ್ಲಾಡಳಿತದ ಮೂಲಕ ದಾನಿ ಕುಟುಂಬಗಳಿಗೆ ಸನ್ಮಾನ್ಯ ಮುಖ್ಯಮಂತ್ರಿಗಳು ಹಾಗೂ ಆರೋಗ್ಯ ಸಚಿವರ ಸಹಿ ಇರುವ ಪ್ರಶಂಸಾ ಪತ್ರಗಳನ್ನು ನೀಡಲಾಗುತ್ತದೆ. ಆ ಮೂಲಕ ಅಂಗಾಂಗ ದಾನಕ್ಕೆ ಹೆಚ್ಚಿನ ಜನರನ್ನು ಪ್ರೇರೇಪಿಸುವ ಕಾರ್ಯಕ್ಕೆ ಸರ್ಕಾರ ಮುಂದಾಗಿದೆ.

### ಅಂಗಾಂಗ ಕೊರತೆಗೆ ಸರ್ಕಾರದ ಕ್ರಮ!

ರಾಜ್ಯದಲ್ಲಿ ನಾನಾ ಅಂಗಾಂಗಗಳ ನಿರೀಕ್ಷೆಯಲ್ಲಿ ಸಾವಿರಾರು ರೋಗಿಗಳು ಕಾಯುತ್ತಿರುವುದನ್ನು ಮನಗಂಡು ಸರ್ಕಾರ ಸೂಕ್ತ ಪರಿಹಾರೋಪಾಯಕ್ಕೆ ಕ್ರಮ ಕೈಗೊಂಡಿದೆ. ರಾಜ್ಯದ ಟ್ರಾಮಾ ಕೇರ್ ಮತ್ತು ತುರ್ತು ಕೇಂದ್ರ(ಟಿಸಿಇಸಿ)






### ಜೀವಸಾರ್ಥಕತೆಯ ಸಾಧನೆಗಳು

- 2026ರ ಜನವರಿ 31ರವರೆಗೆ 538 ಬಿಪಿಎಲ್ ರೋಗಿಗಳಿಗೆ ಉಚಿತ ಕಸಿ ಸೌಲಭ್ಯ.
- 23 ಹೊಸ ಕಸಿ ಕೇಂದ್ರಗಳಿಗೆ ಅನುಮೋದನೆ.
- "ದೇಶದ ಎರಡನೇ ಉತ್ತಮ SOTTO" ಪ್ರಶಸ್ತಿ (2023).
- ಎಕ್ಸಲೆನ್ಸ್ ಇನ್ ಪ್ರಮೋಶನ್ ಆಫ್ ಆರ್ಗನ್ ಡೊನೇಶನ್ ಪ್ರಶಸ್ತಿ – NOTTO (2024).
- ಆನ್‌ಲೈನ್ ಅಂಗಾಂಗ ಹಂಚಿಕೆ ವ್ಯವಸ್ಥೆ ಜಾರಿಗೆ.
- 15ನೇ ರಾಷ್ಟ್ರೀಯ ಅಂಗದಾನ ದಿನ (01.08.2025) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಯಶಸ್ವಿಯಾಗಿ ಆಚರಣೆ.
- ಮಂಗಳೂರು, ಮೈಸೂರು ಮತ್ತು ಶಿವಮೊಗ್ಗಗಳಲ್ಲಿ HLA ಪರೀಕ್ಷಾ ಪ್ರಯೋಗಾಲಯಗಳು ಸ್ಥಾಪನೆ / ಅನುಮೋದನೆ.
- ರಾಜ್ಯದ ಕಸಿ ಚಟುವಟಿಕೆಗಳ ಡಿಜಿಟಲ್ ಏಕೀಕರಣಕ್ಕಾಗಿ ಹೊಸ ಸಾಫ್ಟ್‌ವೇರ್ ಅನುಷ್ಠಾನಗೊಳ್ಳಲಿದೆ.
- SOTTO ಕರ್ನಾಟಕ / ಜೀವಸಾರ್ಥಕತೆ ಅಂಗದಾನಿಗಳ ಸಂಖ್ಯೆಯಲ್ಲಿ ಗಣನೀಯ ಏರಿಕೆ ಕಂಡುಬಂದಿದ್ದು, 2025ನೇ ಸಾಲಿನಲ್ಲಿ ಈಗಾಗಲೇ 198 ಅಂಗದಾನಗಳು ನಡೆದಿವೆ.
- 2007ರಿಂದ 2026ರ ಜನವರಿ 31ರವರೆಗೆ 1302 ದಾನಿಗಳಿಂದ 3649 ಅಂಗಾಂಗಗಳು ಮತ್ತು 2,687 ಅಂಗಾಂಶಗಳನ್ನು ದಾನ ಮಾಡಲಾಗಿದೆ.



### 2017-2025ರ ವರೆಗಿನ ವರ್ಷವಾರು ಅಂಗಾಂಗ ದಾನದ ಅಂಕಿ ಅಂಶಗಳು

